

(6ನೇ ಪುಟದಿಂದ)

ಇವು ಏಷ್ಯಾ, ಆಫ್ರಿಕ, ಅಮೆರಿಕ ಮತ್ತು ಆಸ್ಟ್ರೇಲಿಯದಲ್ಲಿ ಕಂಡುಬರುತ್ತವೆ. ಇವು ಕಲ್ಲುಗಳು, ಮರದ ತೊಗಟೆಯ ಕೆಳಗೆ ಕಂಡುಬರುತ್ತವೆ. ಕಲ್ಲುಗಳ ಕೆಳಗಿನ ಸಂದಿಯಲ್ಲಿ ವಾಸಿಸ ಬೇಕಿರುವುದರಿಂದ ದೇಹ ಚಪ್ಪಟೆಯಾಗಿರುತ್ತದೆ.

ಈ ಜೇಡಕ್ಕೆ ಎಂಟು ಕಣ್ಣುಗಳಿವೆ! ತಲಾ ನಾಲ್ಕರಂತೆ ಮುಂಭಾಗದ ಎರಡು ಸಾಲುಗಳಲ್ಲಿ ಕಂಡುಬರುತ್ತವೆ. ಕಣ್ಣುಗಳು ಮಂದ ಬೆಳಕನ್ನು ಮಾತ್ರ ಗ್ರಹಿಸುತ್ತವೆ. ಮುಂದಿನ ಕಾರ್ಯ ತಂತ್ರವನ್ನು ಕಣ್ಣುಗಳಿಂದ ರೂಪಿಸುತ್ತದೆ. ಬೇಟೆಗಾರ ಜೇಡಗಳನ್ನು ಅವುಗಳ ಕಾಲುಗಳಿಂದ ಗುರುತಿಸಲಾಗುತ್ತದೆ. ಕೈಟಿನನಿಂದ ರಚಿತವಾದ ಅವು ಏಡಿಯ ಕಾಲಿನಂತೆ ಮುಂಭಾಗದಲ್ಲಿ ತಿರುಚಿವೆ. ಇವುಗಳ ಮೇಲ್ಭಾಗದ ಮೇಲೆ ಅಸ್ಪಷ್ಟ ಕಂದು ಇಲ್ಲವೇ ಬೂದು ಬಣ್ಣದ ಛಾಯೆಯಿದೆ. ವದನಾಂಗಗಳ ಮೇಲೆ ಕೆಂಪು ಕಲೆಗಳಿರುತ್ತವೆ. ಕಾಲುಗಳ ಮೇಲೆ ಸೂಕ್ಷ್ಮ ಮುಳ್ಳುಗಳಿದ್ದರೆ, ಉಳಿದ ಭಾಗ ಮೃದುವಾದ ತುಪ್ಪಳ ಹೊಂದಿದೆ. ಈ ಮುಳ್ಳುಗಳು ಸಂವೇದನಾಶೀಲವಾಗಿವೆ. ದೇಹದ ಮೇಲೆ ಕಪ್ಪು, ಬಿಳಿಯ ಪಟ್ಟಿಗಳಿವೆ. ಪ್ರೌಢ ಬೇಟೆಗಾರ ಜೇಡಗಳು ಬಲೆಯನ್ನು ನೇಯುವುದಿಲ್ಲ. ಇದರ ಜೀವಿತಾವಧಿ ಎರಡು ವರ್ಷ.

ಬೇಟೆಯನ್ನು ನಿಷ್ಕ್ರಿಯಗೊಳಿಸಲು ವಿಷವನ್ನು ಚುಚ್ಚುತ್ತವೆ. ಜಿರಲೆಗಳು, ಕೀಟಗಳೇ ಇವುಗಳ ಆಹಾರ. ಕೆಲವೊಮ್ಮೆ ಮನುಷ್ಯರ ಮೇಲೂ ದಾಳಿ ಮಾಡುತ್ತವೆ. ಇದಕ್ಕೆ ಕಾರಣ ಇವು ಕೆಳಭಾಗದಲ್ಲಿ ಅವುಚಿಕೊಂಡಿರುವ ಅಂಡಕೋಶ. ಅದನ್ನು ಕಾಪಾಡುವ ಮಾತೃ ವಾತ್ಸಲ್ಯ!

ಗಂಡಿಗೆ ಸಮೀಪದಲ್ಲೇ ತಮ್ಮ ಪ್ರಭೇದದ ಹೆಣ್ಣಿರುವ ಸೂಚನೆ ಫೇರೋಮೋನ ಎಂಬ ರಾಸಾಯನಿಕದ ವಾಸನೆಯ ಮೂಲಕ ಸಿಕ್ಕೊಡನೆ ವಿಲಕ್ಷಣವಾದ ಶಬ್ದ ಹೊರಡಿಸುತ್ತದೆ. ಅದು ಹೇಗಿರುತ್ತದೆಯೆಂದರೆ ಕತ್ತಲೆಯಲ್ಲಿ ಕೇಳುವ ಗಡಿಯಾರದ ಟಿಕ್ ಟಿಕ್ ಸಪ್ಪಳವನ್ನು ಹೋಲುತ್ತದೆ. ಮುಂದಕ್ಕೆ ಗಂಡು ನೃತ್ಯ ಮಾಡುತ್ತ ಸಾಗಿ ಕಾಲುಗಳ ಮೂಲಕ ಬಾಹ್ಯ ಕಂಪನಗಳನ್ನು ಹೊರಸೂಸುತ್ತದೆ. ಬಹಳಷ್ಟು ಕಂಪನಗಳು ಅದರ ಉದರದ ಕಂಪನದಿಂದ ಹೊರಡುತ್ತವೆ. ಇದು ಹೆಣ್ಣಿಗೆ ಪ್ರೇಮ ಸಂಕೇತ! ಅದಕ್ಕೆ ಮಿಲನದ ಆಸಕ್ತಿಯಿದ್ದರೆ ಗಂಡಿನತ್ತ ನುಗ್ಗುತ್ತದೆ. ದೀರ್ಘ ಪ್ರಣಯಾರಾಧನೆ ಸಾಗುತ್ತದೆ. ಅತ್ಯಂತ ವಿರಳವಾಗಿ ಮಿಲನದ ಅನಂತರ ಹೆಣ್ಣು ಗಂಡಿನ ಮೇಲೆ ದಾಳಿ ಮಾಡುತ್ತದೆ.

ಛಾಯಾಚಿತ್ರಗಳಲ್ಲಿ ಗೋಚರಿಸುವಂತೆ ಹೆಣ್ಣು ಅಗಲ, ಅಂಡಾಕಾರದ ರೇಷ್ಮೆಯಂತಿರುವ ಅಂಡಕೋಶವನ್ನು ಉತ್ಪಾದಿಸುತ್ತದೆ. ಇದರಲ್ಲಿ ಸುಮಾರು 200ರಷ್ಟು ತತ್ತಿಗಳಿರುತ್ತವೆ. ಆಹಾರವಿಲ್ಲದೇ ಮೂರು ವಾರಗಳ ಕಾಲ ಕೋಶವನ್ನು ಹೊತ್ತು ತಿರುಗುತ್ತದೆ. ಈ ಸಮಯದಲ್ಲಿ ಯಾರೇ ಹತ್ತಿರ ಬಂದರೂ ಕೋಪದಿಂದ ಏರಿಹೋಗುತ್ತದೆ. ಕಾವು ಕೊಡುವ ಅವಧಿ ಹವಾಮಾನದ ಸ್ಥಿತಿ ಗತಿಯನ್ನು ಅವಲಂಬಿಸಿರುತ್ತದೆ. ಅಂಡಕೋಶವನ್ನು ಒದ್ದೆಯಾಗಿಸಿ, ಅನಂತರ ಅದನ್ನು ಹರಿದು ಹಾಕಿ ಮರಿಗಳು ಹೊರಬರುವಂತೆ ನೋಡಿಕೊಳ್ಳುತ್ತದೆ. ಮರಿಗಳೊಂದಿಗೆ ಹಲವು ವಾರ ತಾಯಿ ವಾಸಿಸುತ್ತದೆ. ಮತ್ತೆ ಪೊರೆ ಕಳಚಿಕೊಂಡು ಪ್ರೌಢ ಜೇಡ ರೂಪುಗೊಳ್ಳುತ್ತದೆ.

ಹಾಗೆ ನೋಡಿದರೆ, ಇವು ಅಷ್ಟೇನೂ ಅಪಾಯಕಾರಿಯಲ್ಲ. ಕೀಟಗಳನ್ನು ಕಬಳಿಸಿ ರೈತರಿಗೆ ನೆರವಾಗುತ್ತವೆ. ಆದರೆ ಮನುಷ್ಯರಿಗೆ ಕಚ್ಚಿದರೆ ಆಸ್ಪತ್ರೆ ಸೇರಬೇಕಾಗಬಹುದು. ಆಗ ವಾಂತಿ, ನೆಗಡಿ, ತಲೆನೋವು ಗೋಚರಿಸಬಹುದು. ಆದ್ದರಿಂದ ಅಂಡಕೋಶವಿರುವಾಗ ಈ ಜೇಡದ ಹತ್ತಿರ ಸುಳಿಯದಂತಿರುವುದೇ ವಾಸಿ.